# KUVEMPU UNIVERSITY

## SAHYADRI SCIENCE COLLEGE, SHIVAMOGGA – 577 203
(Constituent Autonomous College of Kuvempu University)

## ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ – 577 203

Phone: 08182-240260; 240435 Fax: 08182-240138 e-mail: sscautcontroller@gmail.com web: www.sahyadrisciencecollege.org

ಸಂಖ್ಯೆ: ಕುವಿ/ಸವಿಕಾಶಿ(ಸ್ವಾ)/ಪನಿ/064/2019-20

ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ,
ದಿನಾಂಕ: 04–09–2019

## ಪರೀಕ್ಷಾ ಪ್ರಕಟಣೆ

ವಿಷಯ : ಆಕ್ಟೋಬರ್/ನವೆಂಬರ್–2019 ರಲ್ಲಿ ನಡೆಯುವ B.Sc.,/B.C.A.,/B.Sc(Hons.) / M.Sc (Hons) / B.B.A.(Tourism & Travel), ಪದವಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ಕುರಿತು.

– 0 –

ಸಹ್ಯಾದ್ರಿ ವಿಜ್ಞಾನ ಸ್ವಾಯತ್ತ ಕಾಲೇಜಿನ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಯ ಪ್ರಾಯೋಗಿಕ ಪರೀಕ್ಷೆಗಳು ದಿನಾಂಕ: **30–09–2019** ರಿಂದ ಹಾಗೂ ಸೈದ್ಧಾಂತಿಕ ಪರೀಕ್ಷೆಗಳು ದಿನಾಂಕ: **14–10–2019** ರಿಂದ ಪ್ರಾರಂಭವಾಗುತ್ತದೆ. ವಿವರವಾದ ವೇಳಾಪಟ್ಟಿಯನ್ನು ನಂತರ ತಿಳಿಸಲಾಗುವುದು.

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು **ಆನ್‌ಲೈನ್ ಮುಖಾಂತರ** ಪರೀಕ್ಷಾ ಅರ್ಜಿಗಳನ್ನು ಭರ್ತಿಮಾಡಿ ನಿಗದಿತ ದಿನಾಂಕದೊಳಗೆ **ಅಂಚೆ ಕಛೇರಿಯಲ್ಲಿ ನಗದು ರೂಪದಲ್ಲಿ** ಶುಲ್ಕ ಸಂದಾಯ ಮಾಡಿ ಕಾಲೇಜಿಗೆ ಸಲ್ಲಿಸಲು ತಿಳಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು :**

01. **ದಂಡ ಶುಲ್ಕವಿಲ್ಲದೆ** : 04–09–2019 ರಿಂದ 14–09–2019 ರವರೆಗೆ
02. **ದಂಡ ಶುಲ್ಕ ರೂ. 100=00ರಂತೆ (ಪ್ರತಿ ಸೆಮಿಸ್ಟರ್‌ಗೆ)** : 16–09–2019 ರಿಂದ 18–09–2019 ರವರೆಗೆ

| ವಿವರ | **B.Sc.,** 1,2,3,4,5, ಮತ್ತು 6ನೇ ಸೆಮಿಸ್ಟರ್ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) | **B.C.A.,/B.B.A.,** 1,2,3,4,5, ಮತ್ತು 6ನೇ ಸೆಮಿಸ್ಟರ್ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) | ಷರಾ |
|---|---|---|---|
| ಪ್ರತಿ ಸೈದ್ಧಾಂತಿಕ ಪತ್ರಿಕೆಗೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್‌ನ ಪ್ರತಿ ಪತ್ರಿಕೆಗಳಿಗೆ) | ರೂ. 165/- | ರೂ. 200/- | ಅಂಚೆ ಸೇವಾ ಶುಲ್ಕ ಪ್ರತ್ಯೇಕ |
| ಪ್ರತಿ ಪ್ರಾಯೋಗಿಕ ಪತ್ರಿಕೆಗೆ | ರೂ. 110/- | ರೂ. 110/- | |
| **ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ)** | ರೂ. 200/- | ರೂ. 200/- | |
| ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.720/– ಮೀರದಂತೆ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) | ರೂ. 1080/– ಮೀರದಂತೆ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) | |

| Integrated B.Sc.,/ M.Sc.,(Hons.), | | | | | |
|---|---|---|---|---|---|
| ವಿವರ | | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಶುಲ್ಕ ರೂ. | ಷರಾ |
| 1) | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ. 1780/– | ರೂ. 200/– | 1980/– | ಅಂಚೆ ಸೇವಾ ಶುಲ್ಕ ಪ್ರತ್ಯೇಕ |
| 2) | ಯಾವುದೇ ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಸೈದ್ಧಾಂತಿಕ) (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ. 350/– | ರೂ. 200/– | 550/– | |
| 3) | ಯಾವುದೇ ಸೆಮಿಸ್ಟರ್‌ನ ಒಂದು ಪ್ರಾಯೋಗಿಕ ಪರೀಕ್ಷೆಗೆ (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ. 350/– | ರೂ. 200/– | 550/– | |

**: ವಿಶೇಷ ಸೂಚನೆ :**

**2013–14ನೇ ಮತ್ತು ಅದಕ್ಕಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ (ನೋಂದಣಿ ಸಂಖ್ಯೆ ಬಿಎಸ್/ಬಿಸಿ–06,07,08,09,10,11,12 ಮತ್ತು 13ರಿಂದ ಪ್ರಾರಂಭವಾಗುವ ವಿದ್ಯಾರ್ಥಿಗಳಿಗೆ) ಪರೀಕ್ಷೆ ತೆಗೆದುಕೊಳ್ಳುವ ಅವಕಾಶವಿರುವುದಿಲ್ಲ.**

ಪು. ತಿ. ನೋ.

<u>ವಿದ್ಯಾರ್ಥಿಗಳಿಗೆ ಸೂಚನೆ :</u>

1. ವಿದ್ಯಾರ್ಥಿಗಳು (Online) **ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು** student.logisys.org/ssc ನಲ್ಲಿ login ಆಗಿ ನೊಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರಗಳ್ಳುಳ **ಅರ್ಜಿ ಮುದ್ರಿಸಿ ಅಂಚೆ ಕಛೇರಿಯಲ್ಲಿ ನಗದು ರೂಪದಲ್ಲಿ ಶುಲ್ಕ ಭರಿಸಿದ** ನಂತರ ಪ್ರತಿಯನ್ನು ಕಾಲೇಜಿನ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಸಲ್ಲಿಸಬೇಕು.

2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಚಲನ್ ಮುದ್ರಿಸಿಕೊಂಡು ಅಂಚೆ ಕಛೇರಿ ಮುಖಾಂತರ ಪಾವತಿಸಿದ ನಂತರ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

3. ರೂ.2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ವಾರ್ಷಿಕ ಕುಟುಂಬ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ FRESHERS ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ರೂ.200-00ಗಳನ್ನು ಪಾವತಿಸಬೇಕು.

4. ರೂ.2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

5. ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಕೆನರಾ ಬ್ಯಾಂಕ್ Account No. 13100ಕ್ಕೆ ಜಮಾ ಮಾಡಬೇಕು. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

6. ಪ್ರವರ್ಗ-1ಕ್ಕೆ ರೂ.2.5 ಲಕ್ಷ ಹಾಗೂ ರೂಪಾಯಿ ಒಂದು ಲಕ್ಷ ಅಥವಾ ಇದಕ್ಕಿಂತ ಕಡಿಮೆ ವಾರ್ಷಿಕ ಕುಟುಂಬ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ FRESHERS ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ. ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮೇಲ್ಕಂಡ ಮೀಸಲಾತಿಗೆ ಒಳಪಡುವ ವರ್ಗಗಳ ಮರುಯತ್ನದ (REPEATERS)ವಿದ್ಯಾರ್ಥಿಗಳಿಗೆ ಹಾಗೂ ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯ್ತಿ ಇರುವುದಿಲ್ಲ.**

ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಜಾತಿ/ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಕಡ್ಡಾಯವಾಗಿ ಕಾಲೇಜಿಗೆ ಪರೀಕ್ಷಾ ಅರ್ಜಿಯೊಂದಿಗೆ ಸಲ್ಲಿಸಬೇಕು.

4/9/19

ಪರೀಕ್ಷಾ ನಿಯಂತ್ರಣಾಧಿಕಾರಿ

**ಪರೀಕ್ಷಾ ನಿಯಂತ್ರಣಾಧಿಕಾರಿ**
**ಸಹ್ಯಾದ್ರಿ ವಿಜ್ಞಾನ (ಸ್ವಾಯತ್ತ) ಕಾಲೇಜು**
**ಶಿವಮೊಗ್ಗ.**

ಗೆ :-

01) ಪ್ರಾಚಾರ್ಯರು, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ.
02) ಆಪ್ತ ಕಾರ್ಯಾಲಯ:- ಕುಲಪತಿಗಳು / ಕುಲಸಚಿವರು / ಹಣಕಾಸು ಅಧಿಕಾರಿಗಳು / ಕುಲಸಚಿವರು(ಪ), ಕು ವಿ ವಿ, ಶಂಕರಘಟ್ಟ.
03) ಸಹಾಯಕ ಕುಲಸಚಿವರು, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ.
04) ಅಧೀಕ್ಷಕರು:- ಸಿಬ್ಬಂದಿ ವಿಭಾಗ / ಲೆಕ್ಕ ಶಾಖೆ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾ), ಶಿವಮೊಗ್ಗ
05) ವಿಷಯ ನಿರ್ವಾಹಕರು:- ಪರೀಕ್ಷೆ/ಕ್ಯಾಷ್ ಕೌಂಟರ್/ಸ್ಟೇಷನರಿ/ವಿದ್ಯಾರ್ಥಿ ವೇತನ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ. - **ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.**
06) ಕಛೇರಿ ಪ್ರತಿ.